

ಇತ್ಯಾದಿಯೆಡೆ ತಮಗಾದ ಮುಜುಗರಗಳು, ಅಸುರಕ್ಷಿತ ಸ್ಪರ್ಶಗಳನ್ನು ಕುರಿತು ಹೇಳುವುದು, ದೂರು ದಾಖಲಿಸಲು ಮುಂದಾಗುವುದು ಕಂಡು ಬಂದಿದೆ.

ವಾಸ್ತವವಾಗಿ ಎಲ್ಲೆಡೆ 'ಪಾಶ್ ಕೆಲಸದ ಸ್ಥಳಗಳಲ್ಲಿ ಲೈಂಗಿಕ ಶೋಷಣೆ ತಡೆ ನೀತಿ'ಯಂತೆ 'ಮಕ್ಕಳ ರಕ್ಷಣಾ ನೀತಿ'ಯನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕೆಂಬ ಅರಿವು ಇಲ್ಲದಿರುವುದೂ ಮಕ್ಕಳ ಮೇಲಾಗುವ ಲೈಂಗಿಕ ಶೋಷಣೆಗಳನ್ನು ತಡೆಗಟ್ಟಲು ಮತ್ತು ಶೋಷಕರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಅಡ್ಡಿಯಾಗುತ್ತಿದೆ.

## ವಿಶ್ವ ಆರೋಗ್ಯ ಸಂಸ್ಥೆ

'ಮಕ್ಕಳನ್ನು ಕುರಿತು ಜವಾಬ್ದಾರಿ ಹೊಂದಿರುವ ವಯಸ್ಕರು, ಸಂಬಂಧದಿಂದ, ಅಧಿಕಾರದ ಸ್ಥಾನದಲ್ಲಿರುವವರು, ಮಕ್ಕಳ ವಯಸ್ಸು ಅಥವಾ ಬೆಳವಣಿಗೆಯ ಹಂತಗಳ ದುರುಪಯೋಗ ಮಾಡಿಕೊಂಡು ಲೈಂಗಿಕ ದೌರ್ಜನ್ಯ ಎಸಗುವ ಸಾಧ್ಯತೆಗಳು ಇವೆ. ಮಕ್ಕಳ ಮೇಲಿನ ಲೈಂಗಿಕ ಶೋಷಣೆ ಎಂದರೆ, ತಮಗೆ ಏನಾಗುತ್ತಿದೆ ಎಂದು ಅರ್ಥವಾಗದ ಮತ್ತು ಪರಿಣಾಮಗಳ ಬಗ್ಗೆ ಅರಿವಿಲ್ಲದ ಹಾಗೂ ತಿಳಿವಳಿಕೆಯಿಂದ ಒಪ್ಪಿಗೆಯನ್ನು ನೀಡಲು ಅಸಮರ್ಥರಾದ ಮಕ್ಕಳನ್ನು ಗುರಿಯಾಗಿಸಿಕೊಂಡು ವಯಸ್ಕರು ಅಥವಾ ವಯಸ್ಸಿನಲ್ಲಿ ಹಿರಿಯರಾದ ಇತರ ಮಕ್ಕಳು ನಡೆಸುವ ಲೈಂಗಿಕ ಕ್ರಿಯೆ ಅಥವಾ ಯಾವ ಲೈಂಗಿಕ ಕ್ರಿಯೆ ನಡೆಸಲು ಮಗು ಇನ್ನೂ ದೈಹಿಕವಾಗಿ ವಿಕಾಸವಾಗಿಲ್ಲವೋ ಅಂತಹ ಮಕ್ಕಳ ಮೇಲಿನ ಕ್ರೌರ್ಯ ಅಥವಾ ಮಕ್ಕಳನ್ನು ರಕ್ಷಿಸಲು ಸಮುದಾಯ / ಸರ್ಕಾರ ನಿರ್ಮಿಸಿರುವ ಕಾನೂನುಗಳು ಅಥವಾ ಸಾಮಾಜಿಕ ಕಟ್ಟುಪಾಡುಗಳನ್ನು ವಯಸ್ಕರು ಉಲ್ಲಂಘಿಸುವುದು'. (ವಿಶ್ವ ಆರೋಗ್ಯ ಸಂಸ್ಥೆ, 2006).

ಮಕ್ಕಳನ್ನು ಲೈಂಗಿಕ ಶೋಷಣೆಯಿಂದ ರಕ್ಷಿಸುವ ಕಾಯಿದೆ (POCSO), 2012 ಮಕ್ಕಳ ಮೇಲೆ ಸಂಭವಿಸುವ ವಿವಿಧ ರೀತಿಯ ಲೈಂಗಿಕ ಅಕೃತ್ಯಗಳನ್ನು ಗುರುತಿಸಿದೆ. ಅದು ಅಸುರಕ್ಷಿತ ಸ್ಪರ್ಶವಷ್ಟೇ ಅಲ್ಲ, ಲೈಂಗಿಕ ಅರ್ಥದ ಮಾತುಗಳು, ಶಬ್ದಗಳು, ಚಿತ್ರಗಳನ್ನು ತೋರುವುದು, ಲೈಂಗಿಕ ಅಂಗಗಳನ್ನು ಮುಟ್ಟುವುದು, ಮುಟ್ಟಿಸಿಕೊಳ್ಳುವುದು, ಲೈಂಗಿಕ ಸಂಭೋಗ, ಇತ್ಯಾದಿ.

ತೀವ್ರ ಸ್ವರೂಪದಲ್ಲಿ ಲೈಂಗಿಕ ಶೋಷಣೆ, ಆಘಾತ ಆದ ಸಂದರ್ಭದಲ್ಲಿ ರಕ್ತಸ್ರಾವದಿಂದ ಅಥವಾ ದೈಹಿಕ ಭಾರದ ಒತ್ತಡದಿಂದ ಮಕ್ಕಳು ಮೃತಪಟ್ಟಿರುವ, ಅಂಗವಿಕಲತೆಗೆ ಈಡಾಗಿರುವ ಮತ್ತು ಲೈಂಗಿಕ ಕೃತ್ಯ ಮಾಡಿದವರು ಸಾಕ್ಷ್ಯ ನಾಶದ ಉದ್ದೇಶದಿಂದ ಮಕ್ಕಳನ್ನು ಕೊಂದಿರುವ ಪ್ರಕರಣಗಳು ಆಗಾಗ್ಗೆ ವರದಿಯಾಗುತ್ತಲೇ ಇರುತ್ತವೆ. ಇಷ್ಟಲ್ಲದೆ ಚಿಕ್ಕವಯಸ್ಸಿನ ಮಕ್ಕಳು ಗರ್ಭ ಧರಿಸುವುದು ಮತ್ತು ಅದರೊಂದಿಗಿನ ಅಪಾಯಗಳಿಗೆ ಗುರಿಯಾಗುವುದೂ ಸಾಮಾನ್ಯವೇ ಆಗಿದೆ. ಸಾಮಾನ್ಯವಾಗಿ ಇಷ್ಟು ಭಯಂಕರವಾಗಿ ಇಲ್ಲವೇ ಅಪಾಯಕಾರಿ ಆಗುವ ತನಕ ಶಿಶು ಪೀಡಕರನ್ನು ಗುರುತಿಸುವ, ಕಾನೂನಿನ ವ್ಯಾಪ್ತಿಗೆ ತರುವ ಪ್ರಯತ್ನಗಳು ಆಗದಿರುವುದೇ ವಿಷಾದಕರ.

ಶಿಶು/ಮಕ್ಕಳ ಶೋಷಣೆ ಮಾಡುವವರು ಮತ್ತು ಶೋಷಣೆಗೆ ಗುರಿಯಾದವರಲ್ಲಿ ಹೆಣ್ಣು ಗಂಡು ಮತ್ತು ಇತರ ಲಿಂಗಿಗಳು ಮತ್ತು ಕೆಲವು ತಿಂಗಳುಗಳ ಮಕ್ಕಳಿಂದ ಹಿಡಿದು 18ರ ತನಕದ ಮಕ್ಕಳ ತನಕವೂ ವ್ಯಾಪಿಸಿರುವುದನ್ನು ಪಾಕ್ಸೋ ಕಾಯಿದೆ ಗುರುತಿಸುತ್ತದೆ. ಮಕ್ಕಳ ಮೇಲೆ ಲೈಂಗಿಕ ಶೋಷಣೆ ಮಾಡುವವರ ವಿರುದ್ಧ ದೂರು ದಾಖಲಿಸಿ, ತನಿಖೆ ನಡೆಸಿ ಪೋಕ್ಸೊ ನ್ಯಾಯಾಲಯ ಶಿಕ್ಷೆ ವಿಧಿಸುತ್ತದೆ. ಇಂತಹ ಲೈಂಗಿಕ ಅಕೃತ್ಯ ಮಾಡಿದವರು ಜವಾಬ್ದಾರಿಯಿರುವವರು, ಅದರಲ್ಲೂ ಪೋಷಕರು, ಪಾಲಕರು, ನಂಬಿಕೆಗರ್ಹವಾದ ಪಾತ್ರದಲ್ಲಿರುವವರು, ಶಿಕ್ಷಕರು, ತರಬೇತಿದಾರರು, ವಾರ್ಡನ್, ವೈದ್ಯ, ಪೊಲೀಸ್, ಸೈನ್ಯದಂತಹ ವೃತ್ತಿ ಪಾತ್ರದಲ್ಲಿರುವರಾದರೆ ಅವರ ವಿಕೃತಿ ತೀವ್ರ ಸ್ವರೂಪದ್ದು ಎಂದು ಹೇಳಿ ಹೆಚ್ಚಿನ ಶಿಕ್ಷೆಯನ್ನು ಕಾಯಿದೆ ವಿಧಿಸಿದೆ. ಅದರಲ್ಲೂ 12 ವರ್ಷದೊಳಗಿನವರ ಮೇಲಿನ ಲೈಂಗಿಕ ಅಕೃತ್ಯಗಳನ್ನು ಅಕ್ಷಮ್ಯದ ದೃಷ್ಟಿಕೋನದಿಂದ ಬಿಡುಗಡೆಯೇ ಇಲ್ಲದಂತಹ ಶಿಕ್ಷೆ ವಿಧಿಸಲಾಗುತ್ತದೆ.

ಸುರಕ್ಷಿತ ಸ್ಪರ್ಶ / ಸೇಫ್ ಟಚ್ ಮತ್ತು ಅಸುರಕ್ಷಿತ ಸ್ಪರ್ಶ / ಅನ್‌ಸೇಫ್ ಟಚ್ ಎಂದರೇನು? ಇದನ್ನು ಮಕ್ಕಳಿಗೆ ಗೊಂದಲವಿಲ್ಲದಂತೆ ತಿಳಿಸುವುದು ಪ್ರಮುಖವಾದುದು.

**ಸೇಫ್ ಟಚ್:** ಮುಜುಗರವಾಗದಂತೆ ಮತ್ತು ತೊಂದರೆ ಕೊಡದ ಸ್ಪರ್ಶಗಳು. ಉದಾ. ಅಮ್ಮ ಮತ್ತು ಅಂತಹ ಪಾತ್ರ ವಹಿಸುವವರು ಮಕ್ಕಳನ್ನು ತಬ್ಬಿ ಮಲಗಿಸುವುದು, ಸ್ನಾನ ಮಾಡಿಸುವುದು, ಮಲಮೂತ್ರ ವಿಸರ್ಜನೆಯ ಸಂದರ್ಭದಲ್ಲಿ ಮಗುವನ್ನು ತೊಳೆದು ಶುದ್ಧ ಮಾಡುವುದು, ಡಾಕ್ಟರ್ ಅಪ್ಪ ಅಮ್ಮನ ಎದುರು ಮಗುವನ್ನು ಮುಟ್ಟಿ ತಪಾಸಣೆ ಮಾಡುವುದು, ಶಿಕ್ಷಕರು, ಹಿರಿಯರು ಎಲ್ಲರೆದುರು ಪ್ರಶಂಸಿಸಲು ತಲೆ ಸವರುವುದು ಇಲ್ಲವೇ ಬೆನ್ನು ತಟ್ಟುವುದು, ಹಸ್ತಲಾಘವವನ್ನು ಕೊಡುವುದು, ಆಟ, ನೃತ್ಯ ಸಂದರ್ಭದಲ್ಲಿ ಭಂಗಿಗಳನ್ನು ಹೇಳಿಕೊಡುವಾಗ ಮಗುವಿನ ಒಪ್ಪಿಗೆ ಪಡೆದು ಮುಜುಗರವಾಗದಂತೆ ಮೈ ಕೈ ಕಾಲುಗಳನ್ನು ಮುಟ್ಟುವುದು.

**ಅನ್‌ಸೇಫ್ ಟಚ್:** ಮಕ್ಕಳನ್ನು ಯಾರಾದರೂ ಮುಜುಗರವಾಗುವಂತೆ ದೇಹವನ್ನು ಸವರುವುದು, ಒಳಉಡುಪು ಮುಚ್ಚುವ ಜಾಗ (ಮೂತ್ರ ವಿಸರ್ಜನೆ ಮಾಡುವ ಅಂಗಗಳು, ಎದೆ, ಪೃಷ್ಠ) ಮುಟ್ಟುವುದು, ಮುತ್ತು ಕೊಡುವುದು, ಅಂತಹ ಸ್ಪರ್ಶಗಳನ್ನು ಕುರಿತು ಯಾರಿಗೂ ಹೇಳಬೇಡ ಎಂದು ಪುಸಲಾಯಿಸುವುದು ಅಥವಾ ಹೆದರಿಸುವುದು, ಅಂತಹವುಗಳ ಫೋಟೊ/ ವಿಡಿಯೊ ತೆಗೆಯುವುದು, ಮತ್ತೆ ಮತ್ತೆ ತಾನು ಕೇಳಿದಾಗ ಇಂತಹದರಲ್ಲಿ ಸಹಕರಿಸಲೇಬೇಕು ಎಂದು ಒತ್ತಾಯ ಮಾಡುವುದು.

ಮಕ್ಕಳಿಗೆ ಈ ರೀತಿಯ ಅರಿವು ನೀಡುವ